# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 275 (402) |
| ಉತ್ತರಿಸುವ ದಿನಾಂಕ | 21-12-2022 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರ ಜಿಲ್ಲೆಯಲ್ಲಿ ಭೂ ಪರಿವರ್ತನೆಯಾಗದ ಕೃಷಿ ಜಮೀನುಗಳನ್ನು ನಿವೇಶನಗಳಾಗಿ ಪರಿವರ್ತಿಸಿ ಸಾರ್ವಜನಿಕರು ಸ್ಥಿರಾಸ್ತಿಗಳ ನೋಂದಣಿ ಮಾಡಿಕೊಳ್ಳುತ್ತಿರುವುದು ನಿಜವೇ; | ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋಮು 2008 ದಿನಾಂಕ: 06-04-2009 ಹಾಗೂ ಸದರಿ ಸುತ್ತೋಲೆಗೆ ನೀಡಲಾದ ತಿದ್ದುಪಡಿ ಸುತ್ತೋಲೆಗಳನ್ವಯ ನಿವೇಶನಗಳ ನೋಂದಣಿಗೆ ನಿಗಧಿಪಡಿಸಿರುವ ಅಗತ್ಯ ದಾಖಲೆಗಳನ್ನು ಪಕ್ಷಕಾರರು ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಹಾಜರುಪಡಿಸಿದ್ದಲ್ಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಲಾಗುತ್ತಿದ್ದು, ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 06 ಮುನೋಮು 2013 ದಿನಾಂಕ: 18-07-2014 ರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ-ಸ್ವತ್ತು ತಂತ್ರಾಂಶದಿಂದ ಮಾಹಿತಿ ಪಡೆದು ಉಪ ನೋಂದಣಾಧಿಕಾರಿಗಳು ನೋಂದಾಯಿಸುತ್ತಿದ್ದಾರೆ. |
| ಆ | ಪ್ರಸ್ತುತ ಕಂದಾಯ ನಿವೇಶನಗಳ ನೋಂದಣಿಯು ಸ್ಥಗಿತಗೊಂಡಿರುವುದು ನಿಜವೇ; | |
| ಇ | ಈವರೆವಿಗೂ ಕೃಷಿ ಜಮೀನನ್ನು ನಿವೇಶನಗಳನ್ನಾಗಿ ಮಾಡಿದ ಸಂಖ್ಯೆ ಎಷ್ಟು? (ಸಂಪೂರ್ಣ ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಒಟ್ಟು 5 ತಾಲ್ಲೂಕುಗಳಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 95ರಡಿ ಭೂಪರಿವರ್ತನೆಯಾಗದೇ ಇರುವ ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ಬಡಾವಣೆಗಳನ್ನು ನಿರ್ಮಾಣ ಮಾಡಿರುವ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ. ಸಂ | ತಾಲ್ಲೂಕು | ಒಟ್ಟು ಪ್ರಕರಣಗಳು | ವಿಸ್ತೀರ್ಣ (ಎ/ಗು) |
|---|---|---|---|
| 1 | ಬೆಂಗಳೂರು ಉತ್ತರ | 335 | 405-38.12 |
| 2 | ಬೆಂಗಳೂರು ದಕ್ಷಿಣ | 192 | 559-35.05 |
| 3 | ಬೆಂಗಳೂರು ಪೂರ್ವ | 1105 | 1522-25.05 |
| 4 | ಯಲಹಂಕ | 3285 | 3343-29.04 |
| 5 | ಆನೇಕಲ್ | 574 | 245-27 |
| | ಒಟ್ಟು | 5491 | 6077-35.10 |

ಸಂಖ್ಯೆ: ಕಂಇ/414/ಎಂಎಸ್‌ಎಸ್‌ಎ/2022

(ಆರ್.ಅಶೋಕ)
ಕಂದಾಯ ಸಚಿವರು